ದುಡು ದುಡುನೆ ಓಡ್ತಿದ್ದ ಈರನ್ನ ತಡೆಯೋಕೆ ಅಂತ ಸಣ್ಣಿ ''ಯಪ್ಪಾ, ನಿಂತ್ಕೊಳ್ಳೊ, ಎಲ್ಲಿಗೋಗ್ತಿಯೋ ಯಪ್ಪಾ, ನಿಂತ್ಕೊಳ್ಳೊ" ಅಂತ ಕೂಕ್ಕೊತ್ತಾ ಈರನ್ಹಿಂದೆನೇ ಓಡ್ಬತ್ತಿದ್ಲು. ಈರಾ ''ನಾ ಬರಾಕಿಲ್ಲಾ ಕನೆ, ನನ್ನ ಮಾತಾ ನೀ ಕೇಳಾಕಿಲ್ಲ ಅಂದ ಮ್ಯಾಕೆ ನಾ ಬದ್ಕಾಕಿಲ್ಲ ಕಣಮ್ಮಿ" ಅಂತಾನೆ ಏಳ್ತಾ ಏಳ್ತಾ ಊರಾಗಿನ ಬಾವಿ ಅತ್ರ ನಿಂತ್ಕಂಡು ಒಂದಕ್ಷಣ ಹಿಂತಿರ್ಗಿ ನೋಡಿ ಮಗ್ಳೂ ತನ್ನೀಂದೆನೆ ಬತ್ತಿದ್ದಾಳೆ ಅಂತ ಗೊತ್ಮಾಡ್ಕಂಡು ಬಾವಿ ಒಳಿಕೆ ದುಡಮ್ಮನೆ ನೆಗೆದೇ ಬಿಟ್ಟಾ. ಅದನ್ನು ನೋಡಿ ಬಾವಿ ಅತ್ರಕ್ಕೆ ಓಡಿ ಬಂದ ಸಣ್ಣಿ ಬಾವಿ ಒಳಿಕೆ ಬಗ್ನೋಡಿ ತನ್ನಪ್ಪ ನೀರೊಳ್ಗೆ ಮುಳಗ್ತ ತೆಲ್ತ ಇರೋದನ್ನ ಕಂಡು ಬಾಯ್ಬಾಯ್ ಬಡ್ಕೊತಾ "ಯಪ್ಪಾ ಎಂತಾ ಕೆಲ್ಸ ಮಾಡ್ಕಂಡ್ ಬುಟ್ಟೆ, ನಾ ನಿನ್ನ ಮಾತ್ನೆ ಕೇಳೋದು. ಯಪ್ಪ ನೀನು ಬ್ಯಾಡ ಅಂದ್ರೆ ಆ ಕುಂಟನ್ನ ಮದ್ವೆ ಮಾಡ್ಕಾಳಾಕಿಲ್ಲ, ನೀನು ಮಾತ್ರಾ ಸಾಯ್ಬಾರ್ದು ಕಣೋ ಯಪ್ಪಾ" ಅಂತ ಅಂದವಳೆ ಬಾವಿಯ ಸುತ್ತಾ ಮುತ್ತಾ ನೋಡುತ್ತಾ ''ಯಾರಾದ್ರೂ ಬಂದು ನಮ್ಮಪ್ಪಯ್ಯನ ಉಳಿಸ್ರಪ್ಪಾ" ಅಂತ ಬೇಡಿಕೊಳ್ಳಕೆ ಸುರು ಹಚ್ಚಕಂಡಳು. ಅವಳ ರೋದನ ಕೇಳಿ ಓಡಿ ಬಂದ ಜನ ಬಾವಿ ಸುತ್ತಾ ಮುತ್ತಿಗೆ ಹಾಕಂಡರು. ಚೆನ್ನಾಗಿ ಈಜು ಗೊತ್ತಿದ್ದ ಪುಟ್ಟೀರ ಸರಸರನೆ ಬಾವಿ ಒಳೀಕೆ ಇಳ್ಕಂಡು ನೀರಿಗೆ ನೆಗ್ದು ಮುಳ್ಕತ್ತಾ ಇದ್ದ ಈರಾನ್ನ ಜುಟ್ಟು ಇಡ್ಕೊಂಡು ಒಂಚೂರು ಮೇಲೆ ಬಂದ. ತಕ್ಷಣವೇ ಮೇಲಿದ್ದವರು ಹಗ್ಗನಾ ಕೆಳಿಕೆ ಬುಟ್ಟು ಅವರಿಬ್ರೂನೂ ಮ್ಯಾಕೆತ್ತಿದ್ರು. ಮ್ಯಾಕೆ ಬಂದ ಮ್ಯಾಲೆ ಈರನ್ನಾ ಅಲ್ಲೆ ಮಕ್ಕಾಡಿ ಮಲ್ಗಿಸಿ ಹೊಟ್ಟೆಗೆ ಸೇರಿದ್ದ ನೀರ್ನ ಅದ್ಮಿ ಹೊರ್ಕೆತೆಗೆದ್ರು. ಈರಾ ನೀರನ್ನೇನು ಜಾಸ್ತಿ ಕುಡ್ದಿರ್ಲಿಲ್ಲ.

ಪುಟ್ಟೀರ "ಯಾಕ್ಲಾ ಈರಾ, ಬಾವಿಗೆ ಬಿದ್ದೆ. ಏನಾಗಿತ್ಲಾ ನಿಂಗೆ, ನಾ ಇಳ್ಯೋದು ವಂದೀಟು ತಡ್ವಾಗಿದ್ರೆ ನೆಕ್ಕೊತ್ತಿದ್ದಿಯಲ್ಲ, ನಿಂಗೇನಾಗಿತ್ಲಾ" ಅಂತ ರೇಗಿದ.

''ಪುಟ್ಟೀರಣ್ಣ ನೀನ್ಯಾಕೆ ಬಂದೆ ಯೋಳು, ನಾ ವೊಂಟೋಗಿದ್ರೆ ವೈನಾಗಿತ್ತು ಕಣ್ಲಾ. ನನ್ಯಾಕ್ಲಾ ಉಳಸ್ದೆ ಪುಟ್ಟೀರಣ್ಣ" ಅಂದವನೆ ಗೊಳೋ ಅಂತ ಅಳೋಕೆ ಸುರು ಮಾಡ್ದಾ.

''ಅಲ್ಲ ಕಣ್ಲ ಈರಾ, ಸಾಯೋ ಅಂತದೇನಾಗಿತ್ಲಾ ನಿಂಗೆ, ಮಗ್ಳ ಮದ್ವೆ ಮುಂದೆ ಇಟ್ಕಂಡು ಸಾಯೊಕೆ ವಂಟಿದೆಯಲ್ಲ, ನಿಂಗೇನಾದ್ರೂ ಬುದ್ಧಿ ಐತೆನ್ಲಾ. ನೀನೇ ವಂಟೋಗಿದ್ರೆ ಯಾರ್ಲಾ ನಿನ್ ಮಗಳ್ನ ಮದ್ವೆ ಮಾಡ್ತಿದ್ದೊರೊ, ಗ್ಯಾನ ಬ್ಯಾಡವೇನ್ಲ ನಿಂಗೆ" ಪುಟ್ಟೀರ ಬೈಯ್ಯ ತೊಡಗಿದ.

"ಆ ಮದ್ವೆ ನೋಡೋದು ಬ್ಯಾಡಾ ಅಂತನೆ ಕಣ್ಲಾ ನಾ ಸಾಯೋಕೆ ವೊಂಟಿದ್ದು. ನೀನ್ಯಾಕೆ ನನ್ನ ಉಳ್ಸದೆ ಏಳು. ಇರೋ ಒಂದು ಹೆಣ್ಣು ಮಗೀನಾ ವೈನಾದ ಕಡೀಕೆ ಲಗ್ನ ಮಾಡೋಕಾಗ್ದೆ ಇರೋ ನನ್ನಂತ ಅಪ್ಪ ಬದ್ಕಿರಬಾರದು. ಬಂಗಾರದಂತ ಉಡ್ಗಿನಾ ಕುಂಟಂಗೆ ಕಟ್ತ ಇರೋದನ್ನ ಎಂಗೆ ನೋಡ್ಲಿ. ಕಟ್ಕೊಂಡ ಹೆಣ್ತಿನೂ ನನ್ನ ಮಾತ್ನ ಕೇಳಂಗಿಲ್ಲ, ಮಗಳೂ ನನ್ನ ಮಾತ್ನ ಕೇಳಂಗಿಲ್ಲ, ನಾ ಏನಪ್ಪ ಮಾಡ್ಲಿ'' ಎಂದು ಮಗ್ಳ ಕಡೆ ನೋಡ್ತಾ ದುಃಖದಿಂದ ಹೇಳಿದ.

ಅಪ್ಪನ ದುಃಖ ನೋಡಿ ಸಣ್ಣಿ ತನ್ನಿಂದಾಗಿಯೇ ಅಪ್ಪ ಪ್ರಾಣ ಕಳ್ಕಾಳಕೆ ವೊಂಟಿದ್ದನ್ನು ತಿಳ್ಕಂಡು ಅವಳ ದುಃಖ ಜಾಸ್ತಿಯಾಗಿ ಅಳು ಉಕ್ಕಿ ಉಕ್ಕಿ ಬರತೊಡ್ಗಿತು. ಅಳುತ್ತಲೆ "ಯಪ್ಪಾ, ಯಾಕಿಂಗೆ ಮಾಡ್ಕಂಡು ಬುಟ್ಟೆ. ನೀನೆ ಇಲ್ಲ ಅಂದ ಮ್ಯಾಕೆ ನಾನಾದ್ರೂ ಮದ್ವೆ ಮಾಡ್ಕಂಡು ವೈನಾಗಿರ್ತಿನಾ, ನೀನು ಯಾರ್ನಾ ಲಗ್ನ ಮಾಡ್ಕೊ ಅಂತಿಯೊ ಅವನ್ನೆ ಮಾಡ್ಕೊಂತಿನಿ. ಇನ್ನ ಮ್ಯಾಕೆ ಇಂಗೆಲ್ಲ ಮಾಡ್ಕೊ ಬ್ಯಾಡಾ ಕಣೊ ಯಪ್ಪ" ಅಂತ ಸಣ್ಣಿ ಈರನ್ನ ತಬ್ಕೊಂಡು ಮತ್ತೆ ಜೋರಾಗಿ ಅತ್ತೆ ಬಿಟ್ಟಳು. ಮಗಳ ಮಾತ್ನ ಕೇಳಿ ಈರ ಶಾನೆ ಸಮಾಧಾನ ಆದಂಗೆ ''ಆಗ್ಲಿ ಕಣವ್ವ, ನೀ ಹಿಂಗೆ ಯೋಳ್ದ್ಯಲ್ಲ ಆಟೆ ಸಾಕು ನಂಗೆ. ಆಗ಼್ೆ ಇಂಗೆ ಯೋಳಿದ್ರೆ ನಾನ್ಯಾಕವ್ವ ಬಾವಿಗ್ಬೀಳ್ತ ಇದ್ದೆ ಯೋಳವ್ವ. ನೀ ನನ್ಕಣ್ಮುಂದೆ ಸುಕ್ವಾಗಿರಬ್ಯಾಕು ಕನವ್ವ" ಅಂತ ಮಗ್ಳಿಗೆ ಯೋಳಿ ಮೆಲ್ಗೆದ್ದು ಕುಂತ್ಕಂಡ. ಮಗ್ಳು ತನ್ನ ಮಾತ್ನ ಕೇಳ್ತಳೆ ಅಂತ ಮನದಟ್ಟಾದ ಮ್ಯಾಲೆ ಅವ್ನ ಮನ್ಸಿಗೆ ಶಾನೆ ಸಮಾಧಾನ್ವಾಗಿತ್ತು.